# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ,
## ಪುಲಿಕೇಶಿನಗರ ಉಪ ವಿಭಾಗ, ವಾರ್ಡ್ ನಂ.61(ಎಸ್.ಕೆ ಗಾರ್ಡನ್)
## ವಾರ್ಡ್ ಸಮಿತಿ ಸಭೆ, ದಿನಾಂಕ:07-12-2021 ರ ಸಭಾ ನಡವಳಿ

ಸಂಖ್ಯೆ:ಸ.ಕಾನಿ.ಅ (ಪು.ನ)/ಪಿಆರ್/ / 21-22

ದಿನಾಂಕ: 07-12-2021 ರಂದು ಮಧ್ಯಾಹ್ನ 12.00 ಗಂಟೆಗೆ ವಾರ್ಡ್ ನಂ. 61-ಎಸ್.ಕೆ ಗಾರ್ಡನ್ ವ್ಯಾಪ್ತಿಯಲ್ಲಿ ವಾರ್ಡ್ ಸಮಿತಿಯ ಸಭೆಯನ್ನು ನೋಡಲ್ ಅಧಿಕಾರಿಯವರ ಅಧ್ಯಕ್ಷತೆಯಲ್ಲಿ ಸಹಾಯಕ ಅಭಿಯಂತರರು ರವರ ವಾರ್ಡ್ ಕಛೇರಿ ಐ.ಟಿ.ಐ ಲೇಔಟ್ ಎಸ್.ಕೆ ಗಾರ್ಡನ್ ವಾರ್ಡ್ ಸಂಖ್ಯೆ 61 ರಲ್ಲಿ ನಡೆದ ವಾರ್ಡ್ ಸಮಿತಿ ಸಭೆಯ ನಡುವಳಿಗಳು.

| ಕ್ರ.ಸಂ | ಸಭೆಗೆ ಹಾಜರಾಗಿರುವ ಅಧಿಕಾರಿಗಳು | ಹುದ್ದೆ |
|---|---|---|
| 1 | Atif Ahmed | Nodal Officer ward No. 61-S.K Garden & Asst. Executive Engineer, J.C. Nagar Sub-division |
| 2 | Rangappa B G | Asst. Engineer Ward No.61 |
| 3 | Venkatesh | Senior Health Inspector |
| 4 | Harish | JHI Ward No 61 |
| 5 | Srinivas | Senior Vetenary Inspector |
| 6 | Smt: M. Meena | Welfare Tailoring Teacher |
| 7 | Ragavendra N | Tax Inspector |
| 8 | Narasimhaiah | BWSSB |
| | Manohar | JE Bescom |

ಶ್ರೀ ಅತೀಫ್ ಅಹಮ್ಮದ್, ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು ಜೆ.ಸಿ ನಗರ ಉಪ ವಿಭಾಗ ಹಾಗೂ ವಾರ್ಡ್ ಕಮಿಟಿ ಅಧ್ಯಕ್ಷರು (ನೋಡಲ್ ಅಧಿಕಾರಿ) ರವರು ಸಭೆಯನ್ನುದ್ದೇಶಿಸಿ ಮಾತನಾಡುತ್ತಾ, ಸಭೆಗೆ ಹಾಜರಾಗಿದ್ದ ವಿವಿಧ ಇಲಾಖೆಯ ಅಧಿಕಾರಿ/ ನೌಕರರು ಹಾಗೂ ವಿವಿಧ ಬಡಾವಣೆಯ ಕ್ಷೇಮಾಭಿವೃದ್ಧಿ ಸಂಘದ ಪದಾಧಿಕಾರಿಗಳು ಹಾಗೂ ಸಾರ್ವಜನಿಕರಿಗೆ ಸ್ವಾಗತಿಸುವ ಮೂಲಕ ಸಭೆಯನ್ನು ಪ್ರಾರಂಭಿಸುತ್ತಾ ವಾರ್ಡ್ ಕಮಿಟಿ ಸಭೆಯಲ್ಲಿ ಚರ್ಚಿಸಬೇಕಾದ ಅಜೆಂಡ ವಿಷಯಗಳ ಬಗ್ಗೆ ತಿಳಿಸಿದರು.

- ದಿನಾಂಕ : 06-11-2021 ರಂದು ನಡೆದ ಸಭೆಯ ಸಭಾ ನಡವಳಿಯನ್ನು ಚರ್ಚಿಸಿ ಬಾಕಿ ಇರುವ ಕುಂದು ಕೊರತೆಗಳನ್ನು ಪೂರೈಸಲು ಸಭೆಯಲ್ಲಿ ತಿಳಿಸಿರುತ್ತಾರೆ.
- **ಕಲ್ಯಾಣ ಇಲಾಖೆ:**
  1. ಒಂಟಿ ಮನೆ ನಿರ್ಮಾಣ ಮಾಡಿರುವ ಫಲಾನುಭವಿಗಳಿಗೆ ಕಂತಿನ ಹಣ ಪಾವತಿ ಮಾಡಲು ಸೂಕ್ತ ಕ್ರಮ ಕೈಗೊಳ್ಳಲು ಮತ್ತೊಮ್ಮೆ ಸೂಚಿಸಲಾಯಿತು.
- **ಘನತ್ಯಾಜ್ಯ ನಿರ್ವಹಣೆ ಕೋಶದ ಅಧಿಕಾರಿಗಳಿಗೆ:**
  1. ವಾರ್ಡ್‌ನ ಬ್ಲಾಕ್‌ಸ್ಪಾಟ್‌ಗಳಲ್ಲು ಸ್ವಚ್ಛಗೊಳಿಸಲು ಸಂಬಂಧಪಟ್ಟ ಘನತ್ಯಾಜ್ಯ ನಿರ್ವಹಣ ಸಹಾಯಕ ಕಾರ್ಯಪಾಲಕ ಅಭಿಯಂತರರು/ಕಿರಿಯ ಆರೋಗ್ಯ ಪರಿವೀಕ್ಷಕರಿಗೆ ಅಗತ್ಯಾ ಕ್ರಮ ವಹಿಸಲು ಸೂಚಿಸಲಾಯಿತು.
  2. ಪ್ರತಿ ದಿನ ವಾರ್ಡ್ ಪ್ರದೇಶದಲ್ಲಿ ಉತ್ಪತಿಯಾಗು ತ್ಯಾಜ್ಯ ವಿಲೇವಾರಿ ಅಭಿವೃದ್ಧಿ ಮಾಡುವಂತೆ ಸಂಬಂದಪಟ್ಟ ಸಹಾಯಕ ಕಾರ್ಯಪಾಲಕ ಅಭಿಯಂತರರು ಘನತ್ಯಾಜ್ಯ ನಿರ್ವಹಣೆ ಮತ್ತು ಕಿರಿಯ ಆರೋಗ್ಯ ಪರಿವೀಕ್ಷಕರಿಗೆ ಸೂಚಿಸಲಾಯಿತು.
  3. ಮೋದಿ ರಸ್ತೆಯಲ್ಲಿ ಡೆಬ್ರೀಸ್ ಅನ್ನು ತೆರವುಗೊಳಿಸಲು ಸೂಚಿಸಲಾಗಿರುತ್ತದೆ.
- **ಆರೋಗ್ಯ ಇಲಾಖೆಯ ವೈದ್ಯಾಧಿಕಾರಿಗಳಿಗೆ:**
  1. ವಾರ್ಡ್ ಪ್ರದೇಶ ಸಾರ್ವಜನಿಕರಿಗೆ ಕೋವಿಡ್-19 ರ ಲಸಿಕೆ ವಿತರಣೆ ಹೆಚ್ಚು ಮಾಡುವಂತೆ ಅಗತ್ಯ ಕ್ರಮ ವಹಿಸುವಂತೆ ಸೂಚಿಸಲಾಯಿತು.

Scanned with CamScanner

2. ಕೋವಿಡ್-19 ರ ಟೆಸ್ಟಿಂಗ್ ಹೆಚ್ಚಳ ಮಾಡಲು ಅಗತ್ಯ ಕ್ರಮ ವಹಿಸುವಂತೆ ಸೂಚಿಸಲಾಯಿತು.

- **ವಿದ್ಯುತ್ ವಿಭಾದ ರವರಿಗೆ:**

  1. ವಿಲಿಯಮ್ಸ್ ಟೌನ್ ಹಾಗೂ ಎಸ್.ಕೆ.ಗಾರ್ಡನ್‌ನ ಬೀದಿ ದೀಪಗಳನ್ನು ಸಮರ್ಪಕವಾಗಿ ನಿರ್ವಹಿಸಲು ಬಿಬಿಎಂಪಿ ಮತ್ತು ಬೆಸ್ಕಾಂ ರವರಿಗೆ ಸೂಚಿಸಲಾಯಿತು.

- **ಕಾಮಗಾರಿ ಇಲಾಖೆಗೆ.**

  1. ಎಸ್.ಕೆ.ಗಾರ್ಡನ್ 2ನೇ ಕ್ರಾಸ್ ರಸ್ತೆಗಳಲ್ಲಿ ಪಾಟ್ ಹೋಲ್ಸ್ (Pot holes) ಕಾಮಗಾರಿಯನ್ನು ನಿರ್ವಹಿಸುವಂತೆ ಸೂಚಿಸಲಾಯಿತು.
  2. ಡಿ.ಜೆ.ಹಳ್ಳಿ ಮುಖ್ಯರಸ್ತೆಯಲ್ಲಿ ಚರಂಡಿ ಹೂಳು ತೆಗೆಯಲು ಸೂಚಿಸಲಾಯಿತು.
  3. ಮಧೀನಾ ಮೊಹಲ್ಲಾ ಕ್ವಾಟ್ರಸ್‌ನಲ್ಲಿ ಚರಂಡಿ ಹೂಳು ತೆಗೆಯಲು ಸೂಚಿಸಲಾಯಿತು.

- **ಕಂದಾಯ ಇಲಾಖೆ:**

  1. ಸಂಬಂಧಪಟ್ಟ ವಾರ್ಡ್ ಪ್ರದೇಶಗಳಲ್ಲಿ ಆದಾಯ ತೆರಿಗೆಗಳನ್ನು ವಸೂಲಿ ಮಾಡಿರುವ ಬಗ್ಗೆ ಮಾಹಿತಿ ನೀಡಲು ಸೂಚಿಸಲಾಯಿತು.

- **ಬಿ.ಡಬ್ಲ್ಯೂಎಸ್‌ಎಸ್‌ಬಿ**

  1. ನೂರ್ ಮಸೀದಿ ಮುಖ್ಯರಸ್ತೆಯಲ್ಲಿ ಒಳಚರಂಡಿ ವ್ಯವಸ್ಥೆಯನ್ನು ಸರಿಪಡಿಸುವಂತೆ ಸೂಚಿಸಲಾಯಿತು.

ಮೇಲ್ಕಂಡ ಸಮಸ್ಯೆಗಳು ಬಗ್ಗೆ ಸುದೀರ್ಘವಾಗಿ ಚರ್ಚಿಸಿ, ನೋಡಲ್ ಅಧಿಕಾರಿ ರವರು ವಂದನಾರ್ಪಣೆಯೊಂದಿಗೆ ಸಭೆಯನ್ನು ಮುಕ್ತಾಯಗೊಳಸಲಾಯಿತು.

(ಅತೀಫ್ ಅಹಮ್ಮದ್)
ಅಧ್ಯಕ್ಷರು (ನೋಡಲ್ ಅಧಿಕಾರಿ)
ವಾರ್ಡ್ ಸಮಿತಿ, ವಾರ್ಡ್ ಸಂಖ್ಯೆ: 61

**ಪ್ರತಿಯನ್ನು:**

01. ಕೌನ್ಸಿಲ್ ಕಾರ್ಯದರ್ಶಿ, ಬಿಬಿಎಂಪಿ ಕೇಂದ್ರಕಛೇರಿ, ರವರ ಅವಗಾಹನೆಗಾಗಿ ಸಲ್ಲಿಸಿದೆ.
02. ಮಾನ್ಯ ಜಂಟಿ/ಅಪರ ಆಯುಕ್ತರು (ಪೂರ್ವ) ಬಿಬಿಎಂಪಿ ರವರ ಅವಗಾಹನೆಗೆ ತರಲು ಆಪ್ತ ಶಾಖೆಗೆ ಕಳುಹಿಸಿದೆ.
03. ಮಾನ್ಯ ಜಂಟಿ ಆಯುಕ್ತರು (ಆರೋಗ್ಯ/ಎಸ್‌ಡಬ್ಲ್ಯೂಎಂ) ರವರ ಅವಗಾಹನೆಗೆ ತರಲು ಆಪ್ತ ಶಾಖೆಗೆ ಕಳುಹಿಸಿದೆ.
04. ಉಪ ಆಯುಕ್ತರು (ಪೂರ್ವ), ಬಿಬಿಎಂಪಿ ರವರ ಅವಗಾಹನೆಗೆ ತರಲು ಆಪ್ತ ಶಾಖೆಗೆ ಕಳುಹಿಸಿದೆ.
05. ಕಂದಾಯ ಅಧಿಕಾರಿ (ಪುಲಕೇಶಿನಗರ), ಬಿಬಿಎಂಪಿ ರವರ ಅವಗಾಹನೆಗಾಗಿ ಕಳುಹಿಸಿದೆ.
06. ಸಹಾಯಕ ಕಾರ್ಯಪಾಲಕ ಅಭಿಯಂತರರು(ಪುಲಿಕೇಶಿನಗರ) ಎಸ್‌ಡಬ್ಲ್ಯೂಎಂ, ಬಿಬಿಎಂಪಿ ರವರ ಅವಗಾಹನೆಗಾಗಿ ಕಳುಹಿಸಿದೆ.
07. ಸಹಾಯಕ ಕಾರ್ಯಪಾಲಕ ಅಭಿಯಂತರರು (ಪುಲಿಕೇಶಿನಗರ) ಬಿಬಿಎಂಪಿ ರವರ ಅವಗಾಹನೆಗಾಗಿ ಕಳುಹಿಸಿದೆ.
08. ಸಹಾಯಕ ಅಭಿಯಂತರರು(ವಿದ್ಯುತ್/ಪುಲಕೇಶಿನಗರ) ಬಿಬಿಎಂಪಿ ರವರ ಅವಗಾಹನೆಗಾಗಿ ಕಳುಹಿಸಿದೆ.
09. ಕಛೇರಿ ಕಡತಕ್ಕೆ.

Scanned with CamScanner